C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.115/2021

ದಿನಾಂಕಃ 09.01.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಸಿ. ಡಬ್ಲ್ಯೂ:9 ಪಿ. ಡಬ್ಲ್ಯೂ:7

| | |
|---|---|
| ಸಾಕ್ಷಿದಾರರ ಹೆಸರು | ಶಂಕರೇಗೌಡ |
| ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | 58 ವರ್ಷ |
| ಉದ್ಯೋಗ | ಆಟೋ ಚಾಲಕರು |
| ವಾಸ | ಕುರುಬರಹಳ್ಳಿ, ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಕಳೆದ 20 ವರ್ಷಗಳಿಂದ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನನ್ನ ಸ್ವಂತ ಊರು ಕೃಷ್ಣಾಪುರ. ವ್ಯವಸಾಯಕ್ಕಾಗಿ ನಾನು 15 ದಿವಸಕ್ಕೆ ಅಥವಾ ತಿಂಗಳಿಗೆ ಒಮ್ಮೆ ಬೆಂಗಳೂರಿನಿಂದ ಕೃಷ್ಣಾಪುರಕ್ಕೆ ಬಂದು ಹೋಗಿ ಮಾಡಿಕೊಂಡಿದ್ದೆ. ಚಾಸಾ.2 ಗೊತ್ತು, ಅವರು ನಮ್ಮ ಊರಿನವರು. ಚಾಸಾ.2 ರವರು ಈ ಮೊದಲು ಬಾಡಿಗೆ ಮನೆಯಲ್ಲಿ ವಾಸ ಇದ್ದು, ಈಗ ಕೃಷ್ಣಾಪುರದಲ್ಲಿ ಸ್ವಂತ ಮನೆಯಲ್ಲಿ ವಾಸ ಇದ್ದಾರೆ. ಚಾಸಾ.2 ಸ್ವಂತ ಮನೆಗೆ ಬಂದು ಒಂದು ವರ್ಷ ಆಗಿರಬಹುದು. ಚಾಸಾ.1 ಗೊತ್ತು. ಚಾಸಾ.1 ರವರು, ಚಾಸಾ.2 ರವರು ಬಾಡಿಗೆ ಮನೆಯಲ್ಲಿ ಇದ್ದಾಗ , ಅವರ ಮನೆಯ ಪಕ್ಕದಲ್ಲಿದ್ದ ಪಾಳು ಜಾಗದ ಪಕ್ಕದ ಮನೆಯಲ್ಲಿ ಇದ್ದಾರೆ. ಚಾಸಾ.3 ಗೊತ್ತು, ಅವರು ಚಾಸಾ.2 ರವರ ತಾಯಿ. ಚಾಸಾ.3 ರವರು ಬೆಂಗಳೂರಿನಲ್ಲಿ ಇರುತ್ತಿದ್ದರು ಹಾಗೂ ಊರಿನಲ್ಲಿ ವಾಸ ಇರುತ್ತಿದ್ದರು. ಚಾಸಾ.4, ಚಾಸಾ.5 ಗೊತ್ತು, ಇವರು ಕೃಷ್ಣಾಪುರದವರು. ಚಾಸಾ. 6 ರಿಂದ 8 ಗೊತ್ತು, ಇವರು ನಮ್ಮ ಊರಿನವರು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು

ನೋಡಿರುತ್ತೇನೆ, ಆತನ ಹೆಸರು ದಿಲೀಪ . ಆರೋಪಿ ಚಾಸಾ.2 ರವರ ಅಣ್ಣನ ಮಗ. ಚಾಸಾ.3 ಬೆಂಗಳೂರಿನಲ್ಲಿ ಇರುತ್ತಿದ್ದರು, ಚಾಸಾ.2 ಊರಿನಲ್ಲಿ ಜಮೀನನ್ನು ನೋಡಿಕೊಳ್ಳುವುದಕ್ಕೆ ಇರುತ್ತಿದ್ದರು. ಚಾಸಾ.2 ರವರಿಗೆ ತೆಂಗಿನ ತೋಟ ಇದೆ. ದಿನಾಂಕ 04.06.2020 ರಂದು ನಾನು ಕೃಷ್ಣಾಪುರದಲ್ಲಿ ಮನೆಯಲ್ಲಿ ಮಲಗಿಕೊಂಡಿದ್ದೆನು, ಆಗ ರಾತ್ರಿ 11.00 ಗಂಟೆಯಲ್ಲಿ ಜೋರಾಗಿ ಅಳುವ ತರ ಕೂಗಾಡುವ ಶಬ್ದ ಚಾಸಾ.1 ರವರ ಮನೆ ಹತ್ತಿರ ಕೇಳಿಸಿತ್ತು. ನಾನು ಅಲ್ಲಿಗೆ ಹೋದೆನು. ನಾನಲ್ಲದೆ ಊರಿನ ಜನರು ಚಾಸಾ.1 ರವರ ಮನೆ ಹತ್ತಿರ ಹೋಗಿ ನೋಡಿಕೊಂಡು ಬರುತ್ತಿದ್ದರು. ನಾನು ಹೋದಾಗ ಲೋಕೇಶ, ಭರತ, ನಾರಾಯಣ, ನಾಗರಾಜು ಮತ್ತು ಚಾಸಾ.1 ಬೋರೆಗೌಡ ಅಲ್ಲಿ ಇದ್ದರು. ಚಾಸಾ.2 ರವರ ಬಲಗೈಗೆ ಕುಡಗೋಲಿನಿಂದ ಕತ್ತರಿಸಿದ್ದರು, ಸಿಕ್ಕಾಪಟ್ಟೆ ರಕ್ತ ಬರುತ್ತಿತ್ತು, ರಕ್ತ ಮೇಲಕ್ಕೆ ಚಿಮ್ಮುತ್ತಿತ್ತು. ಚಾಸಾ.2 ರವರ ಹಣೆಗೂ ಸಹಾ ಗಾಯವಾಗಿತ್ತು. ಅವರ ಕೈ ಕಟ್ ಆಗಿತ್ತು.

ಆರೋಪಿ ಮತ್ತು ಆತನ ತಂದೆ ಬಂದು , ಚಾಸಾ.2 ರವರೊಂದಿಗೆ ಆಸ್ತಿ ವಿಚಾರಕ್ಕೆ ಬಂದು ಗಲಾಟೆ ಮಾಡುತ್ತಾ ಇದ್ದರು, ಹೋಗುತ್ತಿದ್ದರು, ಆಸ್ತಿಯ ವಿಚಾರಕ್ಕೆ ಗಲಾಟೆ ಆಗಿತ್ತು. ಘಟನೆಯ ದಿವಸ ಚಾಸಾ.2 ರವರ ತೋಟದಲ್ಲಿ ತೆಂಗಿನ ಕಾಯನ್ನು ಕಿತ್ತಿದ್ದರು. ಆಗ ಆರೋಪಿ ತೋಟಕ್ಕೆ ಹೋಗಿ ಆವಾಜ್ ಹಾಕಿ ಬೈದಿದ್ದರು. ಅದೇ ದಿನ ಸಾಯಂಕಲ 4.00 ಗಂಟೆಯಲ್ಲಿ ತೋಟದಲ್ಲಿ ತೆಂಗಿನ ಕಾಯಿ ಕೀಳುವ ವಿಚಾರದಲ್ಲಿ ಚಾಸಾ.2 ಮತ್ತು ಆರೋಪಿಗೂ ಗಲಾಟೆ ಆಗಿತ್ತು. ನಂತರ ರಾತ್ರಿ 11.00 -11.15 ಗಂಟೆಗೆ ಚಾಸಾ.2 ಇದ್ದ ಬಾಡಿಗೆ ಮನೆಯಲ್ಲಿ ಗಲಾಟೆ ಆಗಿ , ಚಾಸಾ.1 ಬೋರೆಗೌಡರ ಮನೆ ಹತ್ತಿರ ಚಾಸಾ.2 ಬಂದು ಬಿದಿದ್ದರು, ಅವರ ಕೈಯಿಂದ ರಕ್ತ ಸೋರುತ್ತಿತ್ತು. ಚಾಸಾ.2 ಒದ್ದಾಡುತ್ತಿದ್ದರು, ಕಾಪಾಡಿ ನನ್ನನ್ನು ಅಂತ ಕೂಗಾಡುತ್ತಿದ್ದರು. ಆಂಬ್ಯೂಲೆನ್ಸ್‌ಗೆ ಫೋನ್ ಮಾಡಿದರು, ಆಂಬ್ಯೂಲೆನ್ಸ್ ಬಂದಿತ್ತು, ಚಾಸಾ.2 ರವರನ್ನು ನಾನು ಮತ್ತು ಇನ್ನೂ 3 ಜನರು ಸೇರಿ ಆದಿಚುಂಚನಗಿರಿ (ಎ.ಸಿ.ಗಿರಿ) ಆಸ್ಪತ್ರೆಗೆ ಕರೆದುಕೊಂಡು ಹೋದೆವು, 3 ಜನರ ಹೆಸರು ನನಗೆ ನೆನಪಿಲ್ಲ. ಅಲ್ಲಿ ಚಿಕಿತ್ಸೆಯನ್ನು ನೀಡಿದರು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಅಲ್ಲಿಯ ವೈಧ್ಯರು ತಿಳಿಸಿದ್ದರಿಂದ ಚಾಸಾ.2 ರವರನ್ನು ಬೆಂಗಳೂರು ಆಸ್ಪತ್ರೆಗೆ ನಾನು , ಲೋಕೇಶ ಮತ್ತು ನಾಗರಾಜು ಕರೆದುಕೊಂಡು ಹೋದೆವು. ಆ ಸಮಯದಲ್ಲಿ ಕೋವಿಡ್ - 19 ಇತ್ತು. ತೆಂಗಿನಕಾಯಿ ಕೀಳಲು ಬಳಸುವ ಕುಡುಗೋಲು ಅಂದರೆ ಜವಳಿ ಕುಡುಗೋಲಿನಿಂದ ಚಾಸಾ.2 ರವರ ಕೈಗೆ ಹಲ್ಲೆ ಮಾಡಿದ್ದರು. ಪೊಲೀಸರಿಗೆ ನಾನು ಘಟನೆಯ ಬಗ್ಗೆ ಹೇಳಿದ್ದೇನೆ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡರು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದಃ</u>

ನಾನು ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ " ನಾನು 20 ವರ್ಷದಿಂದ ಬೆಂಗಳೂರಿನಲ್ಲಿ ವಾಸ ಇದ್ದೇನೆ , ನನ್ನ ಸ್ವಂತ ಊರು ಕೃಷ್ಣಾಪುರ, ವ್ಯವಸಾಯಕ್ಕಾಗಿ ನಾನು ಬೆಂಗಳೂರಿನಿಂದ 15-20 ದಿವಸಕ್ಕೆ ಕೃಷ್ಣಾಪುರಕ್ಕೆ ಬಂದು ಹೋಗಿ ಮಾಡುತ್ತೇನೆ " ಎಂದು ಹೇಳಿದ್ದೇನೆ. ಈ ರೀತಿ ಹೇಳಿಕೆಯನ್ನು ಪೊಲೀಸರ ಮುಂದೆ ಕೊಟ್ಟಿಲ್ಲ ಹಾಗೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.2 ಕೃಷ್ಣಾಪುರದಲ್ಲಿ 10 ವರ್ಷದಿಂದ ಇದ್ದರು. ಚಾಸಾ.2 ರವರ ಬಾಡಿಗೆಯ ಮನೆಯ ಮಾಲೀಕರ ಹೆಸರು ಸ್ವಾಮಿ. ಸ್ವಾಮಿಯ ತಂದೆಯ ಹೆಸರು ಗೊತ್ತಿಲ್ಲ , ಸಾಕ್ಷಿಯು ಪುನಃ ನುಡಿಯುತ್ತಾರೆ ಗೋವಿಂದಪ್ಪ ಅಂತ ಇರಬಹುದು ಎಂದು. ಸ್ವಾಮಿಯ ತಂದೆಯ ಹೆಸರು ಗೋವಿಂದಪ್ಪ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವಾಮಿ ಎಂಬ ಮನೆಯ ಮಾಲೀಕರು ಯಾರ ಇಲ್ಲ ಎಂದರೆ ಸರಿಯಲ್ಲ. ಮನೆಯ ಮಾಲೀಕರು ಊರಿನಲ್ಲಿ ಅವರ ಅಡಿಕೆ ತೋಟದಲ್ಲಿ ವಾಸ ಮಾಡುತ್ತಿದ್ದಾರೆ. ಮನೆಯ ಮಾಲೀಕರು ಊರಿನಲ್ಲಿ ಅವರ ಅಡಿಕೆ ತೋಟದಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಮನೆಯ ಮಾಲೀಕರಾದ ಸ್ವಾಮಿರವರು ಬದುಕಿದ್ದಾರೆ. ಮನೆಯ ಮಾಲೀಕರು ಮೃತ ಪಟ್ಟಿದ್ದಾರೆ ಎಂದರೆ ಸರಿಯಲ್ಲ. ಮನೆಯ ಮಾಲೀಕರ ಹೆಸರು ಕೆಂಪೇಗೌಡ ಎಂದರೆ ಸರಿಯಲ್ಲ. ಚಾಸಾ.2 ರವರು ಸ್ವಂತ ಮನೆಗೆ ಬಂದು ಒಂದು ವರ್ಷ ಆಗಿದೆ ಅಂತ ನಾನು ಹೇಳಿಕೆಯಲ್ಲಿ ಪೊಲೀಸರ ಮುಂದೆ ಹೇಳಿಲ್ಲ, ಕಾರಣ ಪೊಲೀಸರು ಈ ವಿಷಯವನ್ನು ನನಗೆ ಕೇಳಿರಲಿಲ್ಲ. ಈ ವಿಷಯವನ್ನು ಪೊಲೀಸರ ಮುಂದೆ ಹೇಳುವುದಕ್ಕೆ ನನಗೆ ತೊಂದರೆ ಇರಲಿಲ್ಲ. ಚಾಸಾ.2 ರವರ ಮನೆ , ನಮ್ಮ ಮನೆಯಿಂದ 6 ಸೈಟುಗಳ ನಂತರ ಇದೆ. ಚಾಸಾ.2 ರವರು ಬಾಡಿಗೆಗೆ ಇದ್ದ ಮನೆಯ ಅಕ್ಕಪಕ್ಕದಲ್ಲಿ ಶಂಕರ, ಉಮೇಶ, ನಂತರ ಪಾಳು ಮನೆ ಆಮೇಲೆ ಚಾಸಾ.1 ರವರ ಮನೆ ಇತ್ತು. ಚಾಸಾ.2 ರವರು ಬಾಡಿಗೆಗೆ ಇದ್ದ ಮನೆ ಹತ್ತಿರ, ಏನಾದರೂ ಕೂಗಾಟ ನಡೆದರೆ, ಮೊದಲಿಗೆ ಅಕ್ಕಪಕ್ಕದವರಿಗೆ ಕೇಳಿಸುತ್ತದೆ ಎಂದರೆ ಸರಿ. ಚಾಸಾ.2 ರವರ ಬಾಡಿಗೆ ಮನೆಯಿಂದ 60 ಅಡಿ ದೂರದಲ್ಲಿ ಚಾಸಾ.1 ರವರ ಮನೆ ಇದೆ ಎಂದರೆ ಸರಿ. ನಮ್ಮ ಗ್ರಾಮದ ಜನಸಂಖ್ಯೆ 40 -50 ಜನರು ಇದ್ದಾರೆ. ಚಾಸಾ.3 ರವರು ಊರಿಗೆ ಬಂದಾಗ ತೋಟಗಳನ್ನು ನೋಡಿಕೊಳ್ಳುತ್ತಿದ್ದರು, ವ್ಯವಸಾಯ ಮಾಡುತ್ತಿದ್ದರು. ಬೆಂಗಳೂರಿಗೆ ಹೋದಾಗ, ಫ್ಯಾಕ್ಟರಿ ಕೆಲಸ ಮತ್ತು ಮನೆ ಕೆಲಸ ಮಾಡುತ್ತಿದ್ದರು. ಚಾಸಾ.3 ರವರು, ತೋಟಗಳನ್ನು ನೋಡುತ್ತಿರಲಿಲ್ಲ, ವ್ಯವಸಾಯ ಮಾಡುತ್ತಿರಲಿಲ್ಲ ಹಾಗೂ ಬೆಂಗಳೂರಿಗೆ ಹೋದಾಗ ಫ್ಯಾಕ್ಟರಿ ಮತ್ತು ಮನೆಕೆಲಸಗಳನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.3 ರವರು ಫಿಲಂ ಶೂಟಿಂಗ್ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸಾಕ್ಷಿಯು ಮೇಲೆ ಹೇಳಿದ ಕೆಲಸಗಳನ್ನು ಮಾಡುವುದರ ಜೊತೆಗೆ

ಫಿಲಂ ಶೂಟಿಂಗ್ ಕೆಲಸಕ್ಕೂ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಚಾಸಾ.3 ರವರಿಗೆ ಶೂಟಿಂಗ್ ನಲ್ಲಿ ಭಾಗವಹಿಸುವ ಕೆಲಸವನ್ನು ಬಿಟ್ಟರೆ ಬೇರೆ ಯಾವುದೇ ಕೆಲಸ ಗೊತ್ತಿಲ್ಲ ಎಂದರೆ ಸರಿಯಲ್ಲ.

ಚಾಸಾ.2 ಕೃಷ್ಣಾಪುರಕ್ಕೆ ಬರುವುದಕ್ಕಿಂತ ಮುಂಚೆ ಬೆಂಗಳೂರಿನಲ್ಲಿ ಕಾಮಾಕ್ಷಿಪಾಳ್ಯದಲ್ಲಿ ವಾಸ ಇದ್ದರು. ಕಾಮಾಕ್ಷಿಪಾಳ್ಯದಲ್ಲಿ ಚಾಸಾ.2 ರವರು ಫ್ಯಾಕ್ಟರಿಗೆ ಹೋಗುತ್ತಿದ್ದರು, ಬೇರೆ ಬೇರೆ ಕೆಲಸವನ್ನು ಮಾಡುತ್ತಿದ್ದರು, ಅವರು ಏನು ಕೆಲಸ ಮಾಡುತ್ತಿದ್ದರು ಅಂತ ನನಗೆ ಸರಿಯಾಗಿ ಗೊತ್ತಿಲ್ಲ. ಗೌಡಪ್ಪ ರವರ ಮನೆ ಕಡೆಯಿಂದ ನನಗೆ ಕೂಗಾಡುವ ಅಳುವ ಶಬ್ದ ಕೇಳಿಸುತ್ತಿತ್ತು. ಶಬ್ದ ಕೇಳಿದ 2 ನಿಮಿಷಕ್ಕೆ ನಾನು ಸ್ಥಳಕ್ಕೆ ಹೋದೆನು. ಗೌಡಪ್ಪನವರ ಮನೆ ಹತ್ತಿರ 7-8 ಜನರು ಸೇರಿದ್ದರು ಹಾಗೂ ಬೇರೆ ಬೇರೆ ಜನರು ಬಂದು ಹೋಗುತ್ತಿದ್ದರು. ಚಾಸಾ.2 ರವರಿಗೆ ರಕ್ತ ಬರುತ್ತಿದ್ದುದರಿಂದ ಗಾಬರಿಯಲ್ಲಿ ಯಾವ ಯಾವ ಜನರು ಚಾಸಾ.1 ರವರ ಮನೆ ಹತ್ತಿರ ಬಂದು ಹೋಗುತ್ತಿದ್ದರು ಅಂತ ನಾನು ಗಮನಿಸಲಿಲ್ಲ. ನಾನು ಹೋದಾಗ ಸ್ಥಳದಲ್ಲಿ ನನಗೆ ಗೊತ್ತಿದ್ದ ಚಾಸಾ.1, ಮಧು, ನಾರಾಯಣ, ಭರತ, ನಾಗರಾಜು ಮತ್ತು ಲೋಕೇಶ ಇದ್ದರು ಹಾಗೂ ನನಗೆ ಗೊತ್ತಿಲ್ಲದೆ ಇದ್ದ ಬೇರೆ ಜನರು ಸಹಾ ಇದ್ದರು. ಚಾಸಾ.1 ರವರು ಮನೆಯಲ್ಲಿ ಇದ್ದರೋ ಇಲ್ಲವೋ ಅಂತ ನಾನು ಗಮನಿಸಲಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲದೆ ಇದ್ದುದರಿಂದ, ಚಾಸಾ.1 ರವರ ಮನೆಯಲ್ಲಿ ಯಾರು ಇದ್ದರು , ಇಲ್ಲವೋ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಬೆಂಗಳೂರಿನ ಕಾಮಾಕ್ಷಿ ಪಾಳ್ಯದಲ್ಲಿ ವಾಸ ಇದ್ದಾರೆ. ನಾನು ಬೆಂಗಳೂರಿನಲ್ಲಿ ಎ.ಸಿ. ನಗರ ಕುರುಬರಹಳ್ಳಿಯಲ್ಲಿ ವಾಸ ಇದ್ದೇನೆ. ಆರೋಪಿ ಮಹೇಶ್ ಪಿ.ಯು ಕಾಲೇಜಿನಲ್ಲಿ administrative officer ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಆರೋಪಿ ಏನು ಕೆಲಸ ಮಾಡುತ್ತಿಲ್ಲ ಎನ್ನುತ್ತಾರೆ. ನಾನು ಮತ್ತು ಆರೋಪಿ ಇಬ್ಬರು ಬೆಂಗಳೂರಿನಲ್ಲಿ ವಾಸ ಇರುವುದರಿಂದ, ಆರೋಪಿ ಬೆಂಗಳೂರಿನಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಅಂತ ಗೊತ್ತಿದ್ದರೂ ಸಹಾ , ಆರೋಪಿ ಏನು ಕೆಲಸ ಮಾಡುತ್ತಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.3 ರವರಿಗೆ ಊರಿನಲ್ಲಿ 3 ಎಕರೆ ಜಮೀನು ಇದೆ. ತೆಂಗಿನ ತೋಟದಲ್ಲಿ ಅಂದಾಜು 100 ತೆಂಗಿನ ಮರಗಳು ಇರಬಹುದು. ತೆಂಗಿನ ಕಾಯಿಗಳನ್ನು ಕೀಳುವುದು , ಮಾರಾಟ ಮಾಡುವುದು, ವ್ಯವಸಾಯದಿಂದ ಬಂದಂತ ಆದಾಯವನ್ನು ಚಾಸಾ.2 ರವರೇ ತೆಗೆದುಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತೆಂಗಿನ ಕಾಯಿಗಳನ್ನು ಚಾಸಾ.2 ರವರು ಕೀಳುತ್ತಿದ್ದರು ಎಂದರೆ ಸಾಕ್ಷಿಯು, ಚಾಸಾ.2 ರವರು ತೆಂಗಿನ ಕಾಯಿಗಳನ್ನು ಕೀಳುತ್ತಿದ್ದರು ಹಾಗೂ

ವ್ಯವಸಾಯವನ್ನು ಮಾಡಿಸುತ್ತಿದ್ದರು ಎಂದು ಹೇಳುತ್ತಾರೆ. ನಾನು ಸ್ಥಳಕ್ಕೆ ಹೋದಾಗ ರಕ್ತದ ಮಡುವಿನಲ್ಲಿ ಚಾಸಾ.2 ರವರು ಬಿದ್ದಿದ್ದರು. ನನಗೆ ಅಲ್ಲಿ ಯಾರು ಏನು ಹೇಳಲಿಲ್ಲ.

ನಮ್ಮ ಗ್ರಾಮದಿಂದ ಬೆಳ್ಳೂರು ಪೊಲೀಸ್ ಠಾಣೆ 15 – 16 ಕಿ.ಮಿ ದೂರದಲ್ಲಿ ಇದೆ. ಪೊಲೀಸರಿಗೆ ದೂರು ಕೊಡಲು ಯಾರಾದರು ಪ್ರಯತ್ನಿಸಿದರೋ ಇಲ್ಲವೋ ಎಂಬುದರ ಬಗ್ಗೆ ನಾನು ಗಮನಿಸಲಿಲ್ಲ. ನಾನು ಪೊಲೀಸರಿಗೆ ದೂರು ಕೊಡಲು ಪ್ರಯತ್ನಿಸಲಿಲ್ಲ. ಪೊಲೀಸರಿಗೆ ಫೋನ್ ಮಾಡಲು ನನಗೆ ತೊಂದರೆ ಇರಲಿಲ್ಲ. ಚಾಸಾ.2 ರವರ ವಾಸವಾಗಿದ್ದ ಪಕ್ಕದಲ್ಲಿ ಇದ್ದ ಪಾಳು ಸೈಟು ಯಾರದು ಅಂತ ಗೊತ್ತಿಲ್ಲ. ಚಾಸಾ.2 ರವರಿಗೆ ಹಲ್ಲೆ ಮಾಡಿದ್ದನ್ನು ನಾನು ಕಣ್ಣಾರೆ ನೋಡಿಲ್ಲ. ಚಾಸಾ.2 ರವರಿಗೆ ಯಾರು ಹೊಡೆದಿದ್ದರು ಎಂಬುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.3 ಜವಳಿ ಕುಡುಗೋಲು ಆಗಿರುತ್ತದೆ. ವ್ಯವಸಾಯಕ್ಕೆ ರೈತರು ಯಾವ ಯಾವ ಆಯುಧಗಳನ್ನು ಬಳಸುತ್ತಾರೆ ಅನ್ನುವುದನ್ನು ತಿಳಿದುಕೊಂಡಿದ್ದೇನೆ. ಕುಡುಗೋಲು ಚಿಕ್ಕದಾಗಿದ್ದು ಅದನ್ನು ಜೋಳದ ಕಡ್ಡಿ ಕುಯ್ಯಲ್ಲು, ಹಸಿ ಹುಲ್ಲು ಕುಯ್ಯುವುದಕ್ಕೆ ಬಳಸುತ್ತಾರೆ ಎಂದರೆ ಸಾಕ್ಷಿಯು ಅದನ್ನು ಕುಡುಗೋಲು ಅನ್ನುವುದಿಲ್ಲ ಹುಲ್ಲು ಕುಯ್ಯುವ ಕುಡುಲು ಎನ್ನುತ್ತೇವೆ ಎನ್ನುತ್ತಾರೆ. ಮು.ಮಾ.3 ನ್ನು ಕುಡುಗೋಲು ಹಾಗೂ ಜವಳಿ ಕುಡುಗೋಲು ಎಂದು ಕರೆಯುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಮು.ಮಾ.3 ನ್ನು ಜವಳಿಗೆ , ಬಂಬಿಗೆ ಕಟ್ಟಿಕೊಂಡು ತೆಂಗಿನ ಕಾಯಿ ಕೀಳುವುದಕ್ಕೆ ಬಳಸುತ್ತಾರೆ. ಮು.ಮಾ.3 ನ್ನು ಹುಲ್ಲು ಕುಯ್ಯುವುದಕ್ಕೆ , ಜೋಳದ ಕಡ್ಡಿ ಕುಯ್ಯಲು ಬಳಸುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಊರಿನಲ್ಲಿ ಕುಡುಗೋಲನ್ನು ಬೇರೆ ಹೆಸರಿನಿಂದ ಕರೆಯುತ್ತಾರೆ ಹಾಗೂ ಜವಳಿ ಕುಡುಗೋಲನ್ನು ಬೇರೆ ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿಯಲ್ಲ. ಕುಡುಗೋಲೆ ಬೇರೆ, ಜವಳಿ ಕುಡುಗೋಲೆ ಬೇರೆ ಎಂದರೆ ಸರಿಯಲ್ಲ. ಕುಡುಗೋಲೆ ಬೇರೆ, ಜವಳಿ ಕುಡುಗೋಲೆ ಬೇರೆ ಅಂತ ನನಗೆ ಗೊತ್ತಿದ್ದರೂ ಸಹಾ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಕುಡುಗೋಲು , ಜವಳಿ ಕುಡುಗೋಲು ಒಂದೇ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೈತರು ಮು.ಮಾ.3 ನ್ನು ಜವಳಿ ಕುಡುಗೋಲು ಅಂತ ಮಾತ್ರ ಕರೆಯುತ್ತಾರೆ ಎಂದರೆ ಸರಿಯಲ್ಲ.

ಚಾಸಾ.2 ರವರ ಕೈ ತುಂಡಾಗಿ ನೆಲದ ಮೇಲೆ ಬಿದ್ದಿತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು, ಕೈಗೆ ಪೆಟ್ಟಾಗಿ ಕೈ ನೇತಾಡುತ್ತಿತ್ತು ಎನ್ನುತ್ತಾರೆ. ಆಂಬ್ಯೂಲೆನ್ಸ್ ಗೆ ಯಾರು ಫೋನ್ ಮಾಡಿದರು ಅಂತ ನನಗೆ ಗೊತ್ತಿಲ್ಲ. ನಮ್ಮ ಗ್ರಾಮದಿಂದ ಆದಿ ಚುಂಚನಗಿರಿ ಆಸ್ಪತ್ರೆ 13 – 14 ಕಿ.ಮಿ ಆಗುತ್ತದೆ. ಬೆಳ್ಳೂರಿನಿಂದ ಎ.ಸಿ.ಗಿರಿ ಆಸ್ಪತ್ರೆಗೆ 3 ಕಿ.ಮಿ ಆಗುತ್ತದೆ. ಚಾಸಾ.2 ಮತ್ತು ಆರೋಪಿ ನಡುವೆ ಗಲಾಟೆ ಆಗುತ್ತಿದ್ದಾಗ ನಡೆಯುತ್ತಿದ್ದ ಮಾತುಕತೆಗೆ ನಾನು ಹೋಗುತ್ತಿರಲಿಲ್ಲ. ಆರೋಪಿ ಹಾಗೂ ಚಾಸಾ.2

ರವರ ನಡುವೆ ಊರಿನಲ್ಲಿ ಗಲಾಟೆಯಾಗುತ್ತಿದ್ದ ವಿಚಾರದಲ್ಲಿ ಮಾತುಕತೆ ನಡೆಯುತ್ತಿತ್ತು ಎಂಬ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ. ಆರೋಪಿ ಮತ್ತು ಚಾಸಾ.2 ರವರ ನಡುವೆ ತೆಂಗಿನ ಕಾಯಿ ಕೀಳುವ ವಿಚಾರದಲ್ಲಿ ಗಲಾಟೆ ನಡೆಯುತ್ತಿದೆ ಅಂತ ನನಗೆ ಯಾರು ಹೇಳಿರಲಿಲ್ಲ, ಆದರೆ ಹಾಗೆ ನನಗೆ ಅನ್ನಿಸಿತ್ತು ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿ ಮತ್ತು ಚಾಸಾ.2 ರವರ ನಡುವೆ ತೋಟದಲ್ಲಿ ತೆಂಗಿನ ಕಾಯಿ ಕೀಳುವ ವಿಚಾರದಲ್ಲಿ ಸಂಜೆ 4.00 ಗಂಟೆಯಲ್ಲಿ ಗಲಾಟೆ ನಡೆದಾಗ ನಾನು ಅಲ್ಲಿ ಇರಲಿಲ್ಲ. ತೆಂಗಿನ ಕಾಯಿಗಳನ್ನು ಕಿತ್ತು ಇಟ್ಟಿದ್ದನು ನಾನು ಖುದ್ದಾಗಿ ತೋಟದ ಹತ್ತಿರ ಹೋಗಿ ನೋಡಲಿಲ್ಲ ಎಂದರೆ ಸರಿ. ಚಾಸಾ.2 ಇದ್ದ ಬಾಡಿಗೆ ಮನೆ ಹತ್ತಿರ ಗಲಾಟೆ ನಡೆದಿದ್ದನ್ನು ನಾನು ನೋಡಿಲ್ಲ ಎಂದರೆ ಸರಿ. ಚಾಸಾ.1 ರವರ ಮನೆಗಿಂತ, ಚಾಸಾ.2 ರವರ ಬಾಡಿಗೆ ಮನೆಯ ಅಕ್ಕಪಕ್ಕದಲ್ಲಿ ಸುಮಾರು ಬೇರೆ ಜನರ ಮನೆ ಹತ್ತಿರದಲ್ಲಿ ಇದೆ ಎಂದರೆ ಸರಿ. ಚಾಸಾ.2 ರವರು ಇದ್ದ ಬಾಡಿಗೆ ಮನೆಯಲ್ಲಿ ಏನೇ ಗಲಾಟೆ ಆಗಿದ್ದರೂ, ಅಲ್ಲಿ ಸುತ್ತಾ ಮುತ್ತಾ ಇದ್ದ ಮನೆಯವರಿಗೆ ಮೊದಲು ಕೇಳಿಸುತ್ತಿತ್ತು ಎಂದರೆ ಸರಿ. ಹಳ್ಳಿಗಳಲ್ಲಿ ಗಲಾಟೆ ಆದಾಗ ಸಾಮಾನ್ಯವಾಗಿ ಎಲ್ಲಾ ಹಳ್ಳಿಯ ಜನರು ಗಲಾಟೆ ನಡೆದ ಸ್ಥಳಕ್ಕೆ , ಏನಾಯಿತು ನೋಡೋಣ ಅಂತ ಸೇರಿರುತ್ತಾರೆ ಎಂದರ ಸರಿ. ಆಂಬ್ಯೂಲೆನ್ಸ್ ಸ್ಥಳಕ್ಕೆ ಬಂದಾಗ ಸಮಯ ರಾತ್ರಿ 11.30 ರ ಮೇಲೆ 12.00 ಗಂಟೆ ಒಳಗೆ ಸಮಯವಾಗಿತ್ತು. ಆಂಬ್ಯೂಲೆನ್ಸ್ ನಲ್ಲಿ ನಾನು, ಲೋಕಿ, ನಾಗರಾಜು ಹಾಗೂ ಇನ್ನಿಬ್ಬರು ಹೋಗಿದ್ದೆವು. ನನ್ನ ಹೇಳಿಕೆಯಲ್ಲಿ, ಆಂಬ್ಯೂಲೆನ್ಸ್ ನಲ್ಲಿ ನಾನು ಹೋಗಿದ್ದೆನು ಅಂತ ಹೇಳಿಲ್ಲ. ಎ.ಸಿ.ಗಿರಿ ಆಸ್ಪತ್ರೆ ತಲುಪಿದಾಗ ರಾತ್ರಿ 12.00 ರಿಂದ 12.15 ಗಂಟೆ ಸಮಯ ಆಗಿತ್ತು. ಘಟನೆ ಬಗ್ಗೆ ವೈದರಿಗೆ ಲೋಕೇಶ ಮತ್ತು ನಾಗರಾಜು ಮಾಹಿತಿ ಕೊಟ್ಟರು. ಬೆಂಗಳೂರು ಆಸ್ಪತ್ರೆಗೆ ಜೊತೆಯಲ್ಲಿ ನಾನು, ಲೋಕೇಶ ಮತ್ತು ನಾಗರಾಜು ಹೋಗಿದ್ದೆವು. ಎ.ಸಿ.ಗಿರಿ ಆಸ್ಪತ್ರೆ ಯಿಂದ ಬೆಂಗಳೂರು ಆಸ್ಪತ್ರೆಗೆ 120 ಕಿ.ಮಿ ಆಗುತ್ತದೆ. ನಮ್ಮ ಗ್ರಾಮದಿಂದ ಮಂಡ್ಯ 40 ರಿಂದ 45 ಕಿ.ಮಿ ಆಗುತ್ತದೆ. ಎ.ಸಿ.ಗಿರಿ ಆಸ್ಪತ್ರೆಯಿಂದ ಊರಿಗೆ ಚಾಸಾ.1, ಮಧು, ಶರತ, ನಾರಾಯಣ ಹಾಗೂ ಇನ್ನಿಬ್ಬರು ಊರಿಗೆ ವಾಪಾಸ್ಸು ಬಂದರು. ಎ.ಸಿ.ಗಿರಿ ಆಸ್ಪತ್ರೆಯಿಂದ ಬೆಂಗಳೂರು ಆಸ್ಪತ್ರೆಗೆ ರಾತ್ರಿ 12.00 ಗಂಟೆ ನಂತರ ಹೊರಟಿದ್ದೆವು. ಎ.ಸಿ.ಗಿರಿ ಆಸ್ಪತ್ರೆಯಲ್ಲಿ ವೈದ್ಯರು ಪ್ರಥಮ ಚಿಕಿತ್ಸೆಯನ್ನು ನೀಡಿ, ಹೆಚ್ಚಿನ ಸಲಕರಣೆ ಸೌಲಭ್ಯ ಇಲ್ಲದಿರುವುದರಿಂದ ಬೆಂಗಳೂರು ಆಸ್ಪತ್ರೆಗೆ ಹೋಗುವಂತೆ ಸೂಚಿಸಿದರು. ಪ್ರಥಮ ಚಿಕಿತ್ಸೆ ನೀಡಿದ್ದನ್ನು ಬಿಟ್ಟರೆ, ವೈದ್ಯರು ಬೇರೆ ಏನು ಮಾಡಿದರು ಅಂತ ನನಗೆ ಗೊತ್ತಿಲ್ಲ. ಮಂಡ್ಯ ಆಸ್ಪತ್ರೆ ಹತ್ತಿರ ಇರುವುದರಿಂದ ಮಂಡ್ಯ ಆಸ್ಪತ್ರೆಗೆ ಬಂದು ಚಿಕಿತ್ಸೆ ತೆಗೆದುಕೊಳ್ಳುವುದಕ್ಕೆ ಏನಾದರು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು, ವೈದ್ಯರು ಬೆಂಗಳೂರು ಆಸ್ಪತ್ರೆಗೆ ಹೋಗಲು ಸಲಹೆ ಕೊಟ್ಟಿದ್ದರಿಂದ ಮಂಡ್ಯ ಆಸ್ಪತ್ರೆಗೆ ಬರಲಿಲ್ಲ ಎಂದು ಹೇಳುತ್ತಾರೆ. ಬೆಂಗಳೂರು ಆಸ್ಪತ್ರೆಗೆ ತಲುಪಿದಾಗ ಬೆಳಗಿನ ಜಾವ 4.30 ರಿಂದ 5.00 ಗಂಟೆ ಆಗಿತ್ತು. ಬೆಂಗಳೂರು ಆಸ್ಪತ್ರೆಯಲ್ಲಿ

ಚಾಸಾ.3 ರವರು ನಾವು ಹೋಗುವಷ್ಟರಲ್ಲಿ ಹಾಜರಿದ್ದರು, ಅವರು ವೈದ್ಯರಿಗೆ ಮಾಹಿತಿಯನ್ನು ಕೊಟ್ಟರು. ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದುಕೊಂಡು ಬರುವಂತೆ ಚಾಸಾ.3 ರವರು ನಮಗೆ ಹೇಳಿದ್ದರು.

(ನ್ಯಾಯಾಲಯ ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ, ಪಾಟೀ ಸವಾಲನ್ನು ಮದ್ಯಾಹ್ನದ ಅವಧಿಗೆ ಮುಂದೂಡಲಾಯಿತು)

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 09.01.2023 ರಂದು ಮದ್ಯಾಹ್ನ ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋದಿಸಲಾಗಿದೆ</u>

<u>ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದಃ</u>

ಚಾಸಾ.2 ರವರನ್ನು ಬೆಂಗಳೂರು ಆಸ್ಪತ್ರೆಗೆ ಆಂಬ್ಯೂಲೆನ್ಸ್ ನಲ್ಲಿ ಎ.ಸಿ.ಗಿರಿ ಆಸ್ಪತ್ರೆಯಿಂದ ಕರೆದುಕೊಂಡು ಹೋಗುವಾಗ ಪ್ರಜ್ಞೆ ಇತ್ತು. ಬೆಂಗಳೂರಿನ ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ತಲುಪಿದಾಗ ಚಾಸಾ.2 ರವರಿಗೆ ಪ್ರಜ್ಞೆ ಇತ್ತು. ಎ.ಸಿ.ಗಿರಿ ಆಸ್ಪತ್ರೆಯಲ್ಲಿ ವೈದರು ಪೂರ್ತಿ ಒದ್ದೆಯಾಗಿದ್ದ ಚಾಸಾ.2 ರವರು ಹಾಕಿಕೊಂಡಿದ್ದ ಬಟ್ಟೆಯನ್ನು ತೆಗೆದು ಮಹಜರ್ ಗೆ ಅಂತ ಚಾಸಾ.1 ರವರಿಗೆ ಕೊಟ್ಟರು. ಆ ಸಂದರ್ಬದಲ್ಲಿ ವೈದ್ಯರು ಚಾಸಾ.1 ರವರ ಸಹಿಯನ್ನು ಮಾಡಿಸಿಕೊಂಡಿದ್ದರೋ ಇಲ್ಲವೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಎ.ಸಿ.ಗಿರಿ ಆಸ್ಪತ್ರೆಯಲ್ಲಿ ಚಾಸಾ.2 ರವರು ಧರಿಸಿದ್ದ ಬಟ್ಟೆಗಳನ್ನು ವೈದ್ಯರು ಚಾಸಾ.1 ರವರಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.3 ಜವಳಿ ಕುಡುಗೋಲಿನಿಂದ ಆರೋಪಿ , ಚಾಸಾ.2 ರವರಿಗೆ ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ.

ಆರೋಪಿ , ಚಾಸಾ.2 ರವರಿಗೆ ಹಲ್ಲೆ ಮಾಡಿಲ್ಲದೇ ಇರುವ ವಿಚಾರ ನನಗೆ ಗೊತ್ತಿದ್ದರೂ ಸಹಾ ಹಲ್ಲೆ ಮಾಡಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ.1 ರವರ ಮನೆ ಹತ್ತಿರ ಹೋಗಿ ,15 ರಿಂದ 20 ನಿಮಿಷ ಆದ ಮೇಲೆ ಆಂಬ್ಯೂಲೆನ್ಸ್ ಬಂದಿತ್ತು. ಘಟನೆಯ ಬಗ್ಗೆ ನಾನು ಚಾಸಾ.2 ರವರನ್ನು ವಿಚಾರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹೇಳುತ್ತಾರೆ ಚಾಸಾ.2 ರವರೇ ಸ್ವತಃ ಹೊಡೆದಿದ್ದ ಗಲಾಟೆಯ ವಿಚಾರವನ್ನು ಹೇಳಿಕೊಳ್ಳುತ್ತಿದ್ದರು ಎಂದು. ನಾನು ಚಾಸಾ.1 ರವರ ಮನೆ ಬಳಿ ಹೋದಾಗ, ಚಾಸಾ.2 ರವರು ಗಲಾಟೆ ಆಗಿದ್ದ ವಿಚಾರವನ್ನು ಹೇಳಿಕೊಳ್ಳುತ್ತಿದ್ದರು. ಚಾಸಾ.2 ರವರು ಗಲಾಟೆಯ ವಿಚಾರವನ್ನು ಹೇಳಿಕೊಳ್ಳುತ್ತಿದ್ದಾಗ, ನಾನು, ಭರತ, ಲೋಕೇಶ, ಚಾಸಾ.1 , ಮಧು , ನಾರಾಯಣ ಹಾಗೂ ಇನ್ನೂ 2-3 ಜನರು ಇದ್ದರು. ಚಾಸಾ.1 ರವರ ಮನೆ ಬಳಿ ಹೋದಾಗ, ಚಾಸಾ.1 ರವರ ಮನೆಯ ಜನ , ಮನೆಯ ಒಳಗೆ ಇದ್ದರೋ ಇಲ್ಲವೋ ಎಂಬುದನ್ನು ನಾನು ಗಮನಿಸಲಿಲ್ಲ. ಚಾಸಾ.2 ರವರು ಬಿದಿದ್ದ ಜಾಗ, ಚಾಸಾ.1 ರವರ ಮನೆ ಹತ್ತಿರವಾಗಿತ್ತು. ಚಾಸಾ.2 ಬಿದಿದ್ದ ಜಾಗದಲ್ಲಿ , ಚಾಸಾ.1 ಮಾತ್ರ ಇದ್ದರು , ಅವರು ಮನೆಯವರು ಇರಲಿಲ್ಲ. ನಾನು ಘಟನೆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ, ಚಾಸಾ.2 ರವರಿಗೆ ಹಲ್ಲೆ ಮಾಡಿರಲಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರಿಂದ ಚಾಸಾ.3 ರವರ ಮಾತನ್ನು ಕೇಳಿಕೊಂಡು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.3 ಜ ವಳಿ ಕುಡುಗೋಲಿನಿಂದ ಆರೋಪಿ , ಚಾಸಾ.2 ರವರಿಗೆ ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.2 ಅವರ ತೆಂಗಿನ ತೋಟದಲ್ಲಿ ತೆಂಗಿನ ಕಾಯಿಗಳನ್ನು ಕೀಳುವ ಸಮಯದಲ್ಲಿ ಸ್ವತಃ ಗಾಯಗೊಂಡು, ಆ ಗಾಯವನ್ನು ದುರುಪಯೋಗಪಡಿಸಿಕೊಂಡು ಚಾಸಾ.1 ರಿಂದ ಚಾಸಾ.8 ಹಾಗೂ ನಾನು ಶರೀಕಾಗಿ, ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಗೆ ಸಂಬಂಧಪಟ್ಟಂತೆ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು , ನಾನು ಹೇಳಿಕೆಯನ್ನು ಕೊಟ್ಟಿಲ್ಲ ಪೊಲೀಸರು ಸಹಾ ಕೇಳಲಿಲ್ಲ ಎಂದು ಹೇಳುತ್ತಾರೆ. ಆರೋಪಿಗೆ ತೊಂದರೆ ಕೊಡಬೇಕು ಎಂಬ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ </u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.